# ಭಾರತದಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಮತ್ತು NDPಯ ಭವಿಷ್ಯ ಹೇಗಿರಬೇಕು?

ಆಂಚಲ್ ಚೋಮಲ್



ಭಾರತದಲ್ಲಿ ಮೌಲ್ಯಮಾಪನದ ಸುಧಾರಣೆಗಳ ಕುರಿತಾಗಿ ವಿಸ್ತಾರವಾದರೆ ಚರ್ಚೆ ನಡೆದಿದೆ. ಸ್ವಾತಂತ್ರ್ಯಪೂರ್ವದಲ್ಲೂ ಸ್ವಾತಂತ್ರ್ಯಾನಂತರದಲ್ಲೂ ಹಲವಾರು ಆಯೋಗಗಳೂ ರಾಷ್ಟ್ರೀಯ ನೀತಿ ರೂಪಕರೂ ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆಗಳನ್ನು ತರಬೇಕೆಂದು ಪ್ರತಿಪಾದಿಸಿದ್ದಾರೆ; ಹಾರ್ಟೋಗ್ ಸಮಿತಿ (1929) ಹಾಗೂ ಸಾರ್ಜೆಂಟ್ ಪ್ಲಾನ್ (1944), ಮುದಲಿಯೂರ್ ಆಯೋಗ (1953), ಕೊಠಾರಿ ಆಯೋಗ (1964), ಶಿಕ್ಷಣದ ಕುರಿತ ರಾಷ್ಟ್ರೀಯ ಯೋಜನೆ (ಎನ್.ಪಿ.ಇ.–1968, 1986) ಹೊರೆಯಲ್ಲದ ಕಲಿಕೆ (1993) ಹಾಗೂ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್.ಎಫ್.ಸಿ.–2000–2005) – ಇವುಗಳಲ್ಲಿನ ಕೆಲವು ಪ್ರಮುಖ ಆಲೋಚನೆಗಳು ಹೀಗಿವೆ: ಹಲವು ವಿಭಾಗಗಳ ಮೌಲ್ಯಮಾಪನದ ಮೂಲಕ ಪರೀಕ್ಷೆಯನ್ನು ಸಮಗ್ರ ರೂಪಕ್ಕೆ ತರುವುದು; ಉರು ಹೊಡೆಯುವ ಪದ್ಧತಿಯ ಆಧಾರಿತ ಪ್ರಶ್ನೆಗಳ ಬದಲು ತಿಳಿವಳಿಕೆ, ಬುದ್ಧಿಪ್ರಯೋಗ ಹಾಗೂ ಅರ್ಥಗ್ರಹಣ ಶಕ್ತಿಯನ್ನು ಅಳೆಯುವ ಪ್ರಶ್ನೆಗಳನ್ನು ಕೇಳುವುದು, ಬಹುವಿಧದ ಮೌಲ್ಯಮಾಪನವನ್ನು ಮಾಡುವುದು, ವಿದ್ಯಾರ್ಥಿಗಳ ಕೆಲಸಗಳ ದಾಖಲೆಗಳನ್ನು ಇಡುವುದು, ಅಂಕಗಳ ಬದಲು ಶ್ರೇಣಿಗಳನ್ನು ನೀಡುವುದು ಹಾಗೂ ಇತ್ತೀಚೆಗೆ ಬಂದಿರುವ, ಮಕ್ಕಳ ಕಲಿಕೆಗೆ ಪೂರಕವಾದರೂ ರೂಪಣಾತ್ಮಕವಾದ ಅಥವಾ ಕಲಿಕಾವಧಿಯ ಕೌಶಲ್ಯ ಮಾಪನವನ್ನು ತರುವುದು.

ಈ ಬದಲಾವಣೆಗಳನ್ನು ಪ್ರತಿಬಿಂಬಿಸುತ್ತ, ರಾಷ್ಟ್ರೀಯ ಏಕಾಗ್ರ ತಂಡದ ಗತಿ–ಸ್ಥಿತಿವರದಿಯು ಪರೀಕ್ಷಾ ಸುಧಾರಣೆಗಳ ವಿಷಯದ (ಎನ್.ಸಿ.ಇಆರ್ ಟಿ. 2006) ಪ್ರಸ್ತಾವದಲ್ಲಿ ಪ್ರಸಕ್ತದ ಪರೀಕ್ಷಾ ಪದ್ಧತಿಯಲ್ಲಿ ವೈಧಾನಿಕ ಹಾಗೂ ಸಂರಚನಾ ರೂಪದ ಬದಲಾವಣೆಗಳ ಅಗತ್ಯವನ್ನು ಪ್ರತಿಪಾದಿಸಿದೆ. ಪರೀಕ್ಷೆಯ ಉದ್ದೇಶದಲ್ಲಿ ಮಾತ್ರವಲ್ಲದೆ ಅದರ ಗುಣಮಟ್ಟ, ವಿಧಿ–ವಿಧಾನ, ಉಪಯೋಗ ಹಾಗೂ ಪರಿಣಾಮವೇ ಮುಂತಾದ ಅನೇಕ ಆಯಾಮಗಳಲ್ಲಿ ಬದಲಾವಣೆ ಮಾಡಬೇಕೆಂದು ಅದು ಶಿಫಾರಸುಮಾಡಿದೆ. ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ (ಕಂಟಿನ್ಯೂವಸ್) ಅಂಡ್ ಕಾಂಪ್ರಿಹೆನ್ಸಿವ್ ಇವಾಲ್ಯುವೇಶನ್ – ಸಿಸಿಇ ಎಂಬ ಹೆಸರಿನಲ್ಲಿ ಪರ್ಯಾಯ ಸ್ವರೂಪದ ಅಥವಾ ಪೂರಕವೆನಿಸುವ ಮೌಲ್ಯಮಾಪನ ಪದ್ಧತಿಯನ್ನು, ಶಾಲೆಯ ಒಳಗೆ ನಡೆಯುವ ನಿರಂತರವೂ ಅವಧಿ ಬದ್ಧವೂ ಆದ (ಕಲಿಕೆಗೆ ಮೊದಲು ಅಥವಾ ಕಲಿಕೆಯ ಅವಧಿಯಲ್ಲಿ) ಹಾಗೂ ಸಮಗ್ರ ರೀತಿಯ (ಶಾಲಾ ಸಂಬಂಧಿ ಹಾಗೂ ಶಾಲಾ ಕಲಿಕೆಗೆ ಪೂರಕವಾದ ವಿಷಯಗಳ) ಮತ್ತು ಅನೇಕ ವಿಧಾನಗಳನ್ನು ಬಳಸಿ ನಡೆಸುವ ಮೌಲ್ಯಮಾಪನ ಎಂದು ವ್ಯಾಖ್ಯಾನಿಸಿದೆ.

ಮೌಲ್ಯಮಾಪನ ಪದ್ಧತಿಗಳನ್ನು ಬದಲಾಯಿಸುವಂತೆ ನೀತಿ ನಿರ್ಮಾಪಕರು ಹಾಗೂ ಆಯೋಗಗಳು ಮಾಡಿದ ಒತ್ತಾಯ ಹಾಗೂ ಪ್ರಯೋಗಿಸಿದ ಒತ್ತಡಗಳು ಶಾಲಾ ವ್ಯವಸ್ಥೆಯ ಮೇಲೆ ಅಷ್ಟೇನೂ ಪರಿಣಾಮ ಬೀರಲಿಲ್ಲ. ಈ ಮಧ್ಯೆ 2009ರಲ್ಲಿ ಜಾರಿಗೆ ಬಂದ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಾಲಾ ಶಿಕ್ಷಣದ ಹಕ್ಕನ್ನು ಮಕ್ಕಳಿಗೆ ನೀಡಿದ ಆರ್ ಟಿಇ ಕಾಯಿದೆಯು ಶಾಲೆಗಳು ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಯನ್ನು ಕೈಬಿಟ್ಟು ನಿರಂತರ ಹಾಗೂ ಸಮಗ್ರ ಮೌಲ್ಯಮಾಪನವನ್ನು ಕೈಗೊಳ್ಳಬೇಕೆಂದು ವಿಧಿಸಿತು. 2010ರಲ್ಲಿ ಆರ್ ಟಿಇ ಕಾಯಿದೆ ಬಂದಂದಿನಿಂದಲೂ 'ನಾಪಾಸು ರಹಿತ ಶಿಕ್ಷಣ'ವು ಚಾಲ್ತಿಯಲ್ಲಿದೆ. 'ಮಗುವು ಪ್ರಾಥಮಿಕ ಶಾಲೆಯ ಶಿಕ್ಷಣವನ್ನು ಮುಗಿಸುವವರೆಗೂ ಯಾವುದೇ ಮಂಡಳಿಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಿಲ್ಲ' ಎಂದು ಆರ್ ಟಿಇ ಕಾಯಿದೆಯ 30 (1)ನೇ ಕಲಮು ವಿಧಿಸಿದೆ. ಮಗುವು 14ನೇ ವರ್ಷವನ್ನು ಹೊಂದಿದಾಗ ಎಂಟನೇ ತರಗತಿಯ ಕಲಿಕೆಯನ್ನು ಮುಕ್ತಾಯಗೊಳಿಸಿ ಆರ್ ಟಿಇ ಕಾಯಿದೆಯ ವ್ಯಾಪ್ತಿಯಿಂದ ಹೊರಬರುವ ತನಕವೂ ಯಾವ ಮಗುವನ್ನೂ ಒಂದು ತರಗತಿಯಲ್ಲಿ ಹಿಡಿದಿರಿಸುವುದೂ ಶಾಲೆಯಿಂದ ಹೊರಕಳಿಸುವುದೂ ಸಾಧ್ಯವಿಲ್ಲವೆಂದು ಈ ನೀತಿಯಲ್ಲಿ ಹೇಳಲಾಗಿದೆ.

ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ (ಸಿಸಿಇ) ಹಾಗೂ 'ನಾಪಾಸು ರಹಿತ' ಶಿಕ್ಷಣದ ನೋ ಡಿಟೆನ್ಶನ್ ಪಾಲಿಸಿ ಎನ್ ಡಿಪಿ ನೀತಿಯು ಅಸ್ತಿತ್ವಕ್ಕೆ ಬಂದಾಗಿನಿಂದಲೂ ಅವೆರಡೂ ತೀವ್ರ ರೀತಿಯ ವಿಚಾರ ವಿಮರ್ಶೆಗೆ ಒಳಗಾಗಿವೆ. ಈ ಕ್ರಮದ ವಿಷಯದಲ್ಲಿ ಶಿಕ್ಷಣತಜ್ಞರು, ನೀತಿ ನಿರ್ಮಾಪಕರು, ಶಿಕ್ಷಣರಂಗದ ವೃತ್ತಿನಿರತರು, ಪೋಷಕರು ಹಾಗೂ ವಿದ್ಯಾರ್ಥಿಗಳಿಂದ ಮಿಶ್ರ ಪ್ರತಿಕ್ರಿಯೆ ಕಂಡುಬಂದಿದೆ. ಕೆಲವರು ಈ ನೀತಿಯ ಪರವಾಗಿಯೂ ಇನ್ನು ಕೆಲವರು ವಿರೋಧವಾಗಿಯೂ ಖಂಡ ತುಂಡವಾಗಿ ವಾದಿಸಿದ್ದಾರೆ. ಸಿಸಿಇ ಹಾಗೂ ಎನ್ ಡಿಪಿ ನೀತಿಗಳ ಜಾರಿಯು ತಳಮಟ್ಟದಲ್ಲಿ ಅಸಮರ್ಪಕವಾಗಿ ಹಾಗೂ ದೋಷಪೂರಿತವಾಗಿ ಆಗಬಹುದು ಎಂಬ ಅನುಮಾನವನ್ನು ಹಲವರು ವ್ಯಕ್ತಪಡಿಸಿದ್ದಾರೆ. ಸಿಸಿಇ ಜಾರಿಯೊಂದಿಗೆ ರೂಪಣಾತ್ಮಕ, ಅಂದರೆ ಕಲಿಕಾವಧಿಯ ಹಾಗೂ ಸಂಕಲನಾತ್ಮಕ ಅಂದರೆ ಕಲಿಕಾಂತ್ಯದ ಮೌಲ್ಯಮಾಪನಗಳಲ್ಲಿ ಕೃಪಾಂಕಗಳನ್ನು ಕೊಡುವುದು, ಸಂಕ್ಷಿಪ್ತ ಪರೀಕ್ಷೆಗಳ ಸರಣಿ ಏರ್ಪಡಿಸುವುದು, ವಿದ್ಯಾರ್ಥಿಗಳಿಗೆ ಶ್ರೇಣಿಗಳನ್ನು ನೀಡುವ ಚೌಕಟ್ಟುಗಳನ್ನು ಒದಗಿಸುವುದು, ಪ್ರಾಜೆಕ್ಟ್ ಗಳು ಹಾಗೂ ಕರಸಂಪುಟಗಳನ್ನು ನೀಡುವುದು ಮುಂತಾದ ವಿವಿಧ ನೂತನ ಮೌಲ್ಯಮಾಪನ ಕ್ರಮಗಳು ಜಾರಿಗೆಬಂದಿವೆ. ಪದೇ ಪದೇ ನಡೆಯುವ ಪರೀಕ್ಷೆಗಳನ್ನು ಒಳಗೊಂಡ ಈ ಪದ್ಧತಿಯು ಶಿಕ್ಷಕರಿಗೂ, ಪೋಷಕರಿಗೂ ವಿದ್ಯಾರ್ಥಿಗಳಿಗೂ ಮಾನಸಿಕ ಕ್ಲೇಶವನ್ನೂ ಆತಂಕವನ್ನೂ ಉಂಟುಮಾಡಿದೆ; ಜತೆಗೆ ದತ್ತಾಂಶ ನಮೂದು ಕಾರ್ಯದ ಹೊರೆ ಜಾಸ್ತಿಯಾದುದರ ಪ್ರಯುಕ್ತ ತಖ್ತೆಗಳ ನಮೂದಿನಲ್ಲಿ ದೋಷಗಳು ಕಾಣಿಸಿಕೊಂಡವು. ವಿದ್ಯಾರ್ಥಿಗಳಿಗೆ ಸಿದ್ಧಪ್ರಾಜೆಕ್ಟ್ ಗಳನ್ನು ಒದಗಿಸುವ ಉದ್ಯಮವೇ ಪ್ರಾರಂಭವಾಯಿತು. ವಯಸ್ಸಿಗೆ ತಕ್ಕುದಾದ ಅರ್ಹತೆಗಳನ್ನು ಗಳಿಸಿಕೊಳ್ಳದಿದ್ದರೂ ಮಕ್ಕಳನ್ನು ಮುಂದಿನ ತರಗತಿಗಳಿಗೆ ತಳ್ಳುವ ಅನಪೇಕ್ಷಿತ

ವಿದ್ಯಮಾನವೂ ಪೂರಕ ಕಲಿಕೆಯ ಕುರಿತಾಗಿ ತಾತ್ಕಾಲಿಕ ಮೌಲ್ಯಮಾಪನಗಳನ್ನು ಮಾಡುವುದೇ ಮುಂತಾದ ಬೆಳವಣಿಗೆಗಳು ಕಂಡುಬಂದಿವೆ.

ಇದರಿಂದಾಗಿ, ಸಿಸಿಇಯು ಪರೀಕ್ಷೆಯಿಂದಾಗಿ ಉಂಟಾಗುವ ಒತ್ತಡವನ್ನು ತಗ್ಗಿಸುವುದರ ಬದಲಾಗಿ ಜಾಸ್ತಿ ಮಾಡಿದೆಯೆಂದು ಬಹುತೇಕರು ಭಾವಿಸುವಂತೆ ಆಗಿದೆ. ಅಂತೆಯೇ 'ನಾಪಾಸುರಹಿತ ಕಲಿಕೆ' ಪದ್ಧತಿಯಿಂದಾಗಿ ಶಿಕ್ಷಕರಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಬೋಧನೆ ಹಾಗೂ ಕಲಿಕೆಗೆ ಪ್ರೇರಣೆ ಕಡಿಮೆಯಾಗಿದೆ ಎಂಬ ಟೀಕೆ ಕೇಳಿಬರುತ್ತಿದೆ. ಇವೆಲ್ಲದರ ಪರಿಣಾಮವಾಗಿ, ಒಂದು ದೇಶವಾಗಿ ನಾವು ಇನ್ನೂ ಈ ರೀತಿಯ ಮೌಲ್ಯಮಾಪನಕ್ಕೆ ಸಿದ್ಧರಾಗಿಲ್ಲ ಎಂದು ಹಲವರು ತೀರ್ಮಾನಕ್ಕೆ ಬರುವಂತೆ ಆಗಿದೆ.

ಇಂತಹ ಕಳಕಳಿ ಹಾಗೂ ಪರಿಕಲ್ಪನೆಗಳ ನಡುವೆಯೂ ಈ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಅಂದರೆ ಏನು ಎಂಬ ಬಗ್ಗೆ ನಮ್ಮಲ್ಲಿ ಸಾಕಷ್ಟು ಚರ್ಚೆ-ಸಮಾಲೋಚನೆಗಳು ನಡೆದೇ ಇಲ್ಲ. ನಮಗೆ ಇದರ ಅಗತ್ಯ ಏನಿದೆ? ನಮ್ಮ ದೇಶದ ಶೈಕ್ಷಣಿಕ ಉದ್ದೇಶ ಹಾಗೂ ತತ್ತ್ವಗಳನ್ನು ಸಾಧಿಸುವುದಕ್ಕೆ ಇದು ಪೂರಕವಾಗಿದೆಯೇ? ಇದನ್ನು ಜಾರಿಮಾಡಬೇಕೆಂಬ ಹುಮ್ಮಸ್ಸಿನಲ್ಲಿ ನಾವು ಸಿಸಿಇ ಅಂದರೆ ನಿಜವಾಗಿಯೂ ಏನು ಎಂದು ಅರ್ಥಮಾಡಿಕೊಳ್ಳಲು ಮುಂದಾಗಲೇ ಇಲ್ಲ.

ಸಿಸಿಇಯು ಮಕ್ಕಳ ಕಲಿಕೆ, ಬೋಧನೆ- ಕಲಿಕೆ ಪ್ರಕ್ರಿಯೆ, ಮೌಲ್ಯಮಾಪನಗಳ ಉದ್ದೇಶ ಹಾಗೂ ಶಿಕ್ಷಕರ ಪಾತ್ರದ ಕುರಿತಾದ ಊಹನೆಗಳ ಮೇಲೆ ಆಧರಿತವಾಗಿದೆ.

1. ಕಲಿಕೆಯೆಂಬುದು ನಿರಂತರವಾಗಿ ನಡೆಯುವ ಕಾರ್ಯ ಎಂಬುದು ಸಿಸಿಇಯ ಪ್ರಮುಖ ಗ್ರಹಿಕೆಯಾಗಿದೆ. ತರಗತಿಯೊಳಗೆ, ತರಗತಿಯ ಹೊರಗೆ, ಪ್ರಯೋಗಶಾಲೆಯಲ್ಲಿ ವಿಜ್ಞಾನದ ಪ್ರಯೋಗವನ್ನು ನಡೆಸುವಾಗ, ಗಣಿತದ ತೊಡಕನ್ನು ಬಿಡಿಸುವಾಗ, ಯೋಚನೆಗಳನ್ನು ಪದ್ಯ ರೂಪದಲ್ಲಿಯೋ ಕವಿತೆಯಾಗಿಯೋ ಚಿತ್ರವಾಗಿಯೋ ಕಾಗದದ ಮೇಲೆ ಬರೆಯುವಾಗ, ಶಾಲೆಯೊಳಗೆ ಅಥವಾ ಹೊರಗೆ ಇರುವ ಪ್ರತಿಕ್ಷಣವೂ ವಿದ್ಯಾರ್ಥಿಗಳು ವಿವಿಧರೂಪದಲ್ಲಿ ಹಾಗೂ ವಿವಿಧ ಮಾದರಿಯಲ್ಲಿ ಕಲಿಯುತ್ತಲೇ ಇರುತ್ತಾರೆ.
2. ಕಲಿಕೆಯ ಪ್ರಕ್ರಿಯೆಯು ನಿರಂತರವಾಗಿ ಎಡೆಬಿಡದೆ ನಡೆಯುವುದರಿಂದ, ಅಂತಹ ಕಲಿಕೆಗೆ ಉತ್ತೇಜನವನ್ನು ನೀಡುವುದಕ್ಕಾಗಿ ಶಾಲೆಯಲ್ಲಿನ ಬೋಧನೆಯ ವಿಧಿವಿಧಾನಗಳೂ ಗತಿಶೀಲವಾಗಿರಬೇಕಾಗುತ್ತದೆ. ವಿದ್ಯಾರ್ಥಿಗಳ ವಿವಿಧ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಅಗತ್ಯವುಳ್ಳ ಅವಕಾಶಗಳು, ಬಹುವಿಧದ ಕಲಿಕೆಯ ಅನುಭವಗಳಲ್ಲಿ ನಿರತರಾಗಲು, ಕಲ್ಪನಾಶೀಲವಾದ ಜ್ಞಾನವನ್ನು ಪಡೆಯಲು ಹಾಗೂ ಸಮಾನ ವಯಸ್ಕರೊಡನೆ ಬೆರೆತು ಕೆಲಸ ಮಾಡುವ ರೂಢಿಯನ್ನು ಬೆಳೆಸಬೇಕು.
3. ಬೋಧನೆ-ಕಲಿಕೆ ಪ್ರಕ್ರಿಯೆ ಗತಿಶೀಲವಿರುವಾಗ ಮೌಲ್ಯಮಾಪನದ ಸ್ವರೂಪವೂ ಗತಿಶೀಲವಾಗಿ ಇರಬೇಕಾಗುತ್ತದೆ. ರೂಪಣಾತ್ಮಕ ಮೌಲ್ಯಮಾಪನ, ಅಂದರೆ ಕಲಿಕಾವಧಿಯಲ್ಲಿ ನಡೆಯುವ ಮೌಲ್ಯಮಾಪನದ ಉದ್ದೇಶವು ಮಗುವಿನ ಕಲಿಕೆಯ ಪ್ರಗತಿಯನ್ನು ತಿಳಿದುಕೊಳ್ಳಲು ಶಿಕ್ಷಕರಿಗೆ ನೆರವನ್ನು ಒದಗಿಸಿ ಕಲಿಕೆಯ ಅನುಭವದ ಉಪಯುಕ್ತತೆ ಅಥವಾ ಗುಣಮಟ್ಟವನ್ನು ಮೌಲ್ಯಮಾಪನ ಮಾಡುವುದಾಗಿದೆ. ಈ ತನಕದ ಬಹುತೇಕ ಮೌಲ್ಯಮಾಪನಗಳು ಅಂಕ ಅಥವಾ ಶ್ರೇಣಿಗಳನ್ನು ನೀಡುವಂತಹವುಗಳಾಗಿದ್ದು ಆ ಮೌಲ್ಯಮಾಪನದ ಮಾನದಂಡಗಳು ಯಾವುವು ಎಂಬುದು ಸ್ಪಷ್ಟವಾಗುತ್ತಿರಲಿಲ್ಲ. ಈ ಮೌಲ್ಯಮಾಪನಗಳಿಂದ ವಿದ್ಯಾರ್ಥಿಗೆ ತನ್ನ ಕಲಿಕೆಯಲ್ಲಿ ಯಾವುದಕ್ಕೆ ಹೆಚ್ಚು ಗಮನಹರಿಸಬೇಕೆಂಬ ಸಮರ್ಪಕ ಮತ್ತು ವಿಶ್ವಸನೀಯ ಸೂಚನೆಯಾಗಲಿ ಮಾರ್ಗದರ್ಶನವಾಗಲಿ ಸಿಗುತ್ತಿರಲಿಲ್ಲ.
4. ರೂಪಣಾತ್ಮಕ ಮೌಲ್ಯಮಾಪನವೆಂಬುದು ಪ್ರಸಕ್ತ ಹೆಚ್ಚಿನ ನಮ್ಮ ಶಾಲೆಗಳಲ್ಲಿ ಬಳಸುತ್ತಿರುವ ಯಾವುದೇ ರೀತಿಯ ಮೌಲ್ಯಮಾಪನ ಪದ್ಧತಿಗಿಂತ ಮೂಲಭೂತವಾಗಿ ಬೇರೆಯೇ ಆದುದು. ಅದು ತುಂಬಾ ಎಚ್ಚರಿಕೆಯಿಂದ ಆರಿಸಲಾದ ಮೌಲ್ಯಮಾಪನ ಪದ್ಧತಿಗಳ ಸರಣಿಯ ಮೂಲಕ ಪ್ರತಿಯೊಂದು ಮಗುವಿನ ಕಲಿಕೆಯ ಪ್ರಗತಿಯನ್ನು ದಾಖಲಿಸುವುದು. ಇವುಗಳಲ್ಲಿ ಹಲವು ವಿಧಾನಗಳು ಅನೌಪಚಾರಿಕವೂ ಆಗಿರಬಹುದು; ಇವುಗಳು ಶಿಕ್ಷಕನ ಬೋಧನಾ ಕಾರ್ಯಕ್ರಮದಲ್ಲಿ ಅಂತರ್ಗತವಾಗಿರುತ್ತವೆ. ಪ್ರತಿಯೊಂದು ಮಗುವಿನ ಸುಗಮ ಕಲಿಕೆಗೆ ಯಾವುದೆಲ್ಲಾ ಸಹಾಯವು ಯಾವ ರೂಪದಲ್ಲಿಬೇಕು ಎಂಬುದನ್ನು ಶಿಕ್ಷಕಿಯು, ಮಗುವಿನ ಪ್ರಗತಿಯ ಕುರಿತಾದ ದತ್ತಾಂಶಗಳನ್ನು ಜಾಗರೂಕತೆಯಿಂದ ಅಧ್ಯಯನದ ಮೂಲಕ ವಿಶ್ಲೇಷಣೆ ಮಾಡಿ ತೀರ್ಮಾನಿಸಬೇಕಾಗುತ್ತದೆ. ಯಾವುದರ ಮೌಲ್ಯಮಾಪನವನ್ನು ಮಾಡಬೇಕು ಎಂಬುದು ಪಠ್ಯ ವಿಷಯದ ಕಲಿಕೆಯ ಉದ್ದೇಶಗಳ ಬಗ್ಗೆ ಶಿಕ್ಷಕಿ ಹೊಂದಿರುವ ಆಳವಾದ ಸ್ಪಷ್ಟತೆಯಿಂದ ನಿರ್ಧರಿತವಾಗುತ್ತದೆ. ಮೌಲ್ಯಮಾಪನವನ್ನು ಹೇಗೆ ಮಾಡಬೇಕು ಎಂಬುದನ್ನು ಆಯಾ ಮಗುವಿನ ಕಲಿಕೆಯ, ಹಾಗೂ ಪರಿಣತಿಯ ಮಟ್ಟ ಮತ್ತು ಅಗತ್ಯದ ನೆಲೆಯಲ್ಲಿ ಶಿಕ್ಷಕಿಯು ನಿರ್ಧರಿಸಿ ಸೂಕ್ತವಾದ ಪರೀಕ್ಷಾ ಪರಿಕರಗಳನ್ನು ಆಯ್ಕೆಮಾಡಬೇಕಾಗುತ್ತದೆ.
5. ಕೊನೆಯದಾಗಿ, ಆದರೆ ತುಂಬಾ ಮಹತ್ತ್ವದ್ದು ಎಂದೆನಿಸುವ ಊಹನೆಯು ಶಿಕ್ಷಕಿಯ ಪಾತ್ರದ ಕುರಿತಾದುದು. ಔಪಚಾರಿಕವಾದ ಶಾಲಾವಾತಾವರಣಗಳಲ್ಲಿ ಮಗುವಿನ ಕಲಿಕೆಗೆ ಅನುವು ಮಾಡಿಕೊಡುವುದರಲ್ಲಿ ಶಿಕ್ಷಕಿಯ ಪಾತ್ರ ಅತ್ಯಂತ ಮಹತ್ತ್ವವಾದುದು. ಅವರು ಆ ಪಾತ್ರವನ್ನು ನಿರ್ವಹಿಸುವ ಸಂದರ್ಭದಲ್ಲಿ ಮಕ್ಕಳ ಕುರಿತು ಹಾಗೂ ಆ ಮಕ್ಕಳು ಹೇಗೆ ಕಲಿಯುವರು ಎಂಬ ಕುರಿತು ಅವರು ಹೊಂದಿರುವ ನಂಬಿಕೆಯು ಅತ್ಯಂತ ನಿರ್ಣಾಯಕವೆನಿಸುತ್ತವೆ. ಮಕ್ಕಳ ಕಲಿಯುವ ಸಾಮರ್ಥ್ಯದ ಬಗ್ಗೆ ಶಿಕ್ಷಕಿಗೆ ಯಾವುದೇ ಅನುಮಾನ ಅಥವಾ ಪಕ್ಷಪಾತ ದೃಷ್ಟಿ ಇದ್ದರೆ ಮಗುವಿನ ಕಲಿಕೆಯ ಪ್ರಯತ್ನಗಳು ವಿಫಲವಾಗಬಹುದು. ತರಗತಿಯಲ್ಲಿ ತನ್ನ ಸ್ವಂತ ಪಾತ್ರದ ಬಗ್ಗೆ ಶಿಕ್ಷಕಿ ಹೊಂದಿರುವ ನಂಬಿಕೆಯೂ ಅತ್ಯಂತ ಮಹತ್ತ್ವವಾದುದು. ಮಕ್ಕಳ ಅನುಭವಗಳಿಗೆ ಬೆಲೆ ಕೊಡುವ, ಮಕ್ಕಳ ಕಲಿಕೆಯ ಕಾರ್ಯಗಳಿಗೆ ಅವಕಾಶಗಳನ್ನು ಒದಗಿಸುವ, ಮಕ್ಕಳೊಂದಿಗೇ ಸೇರಿ ಕೆಲಸ ಮಾಡುವ, ಅವರ ಕಲಿಕಾ ಸಂಬಂಧಿಯಾದ ಮತ್ತು ಕಲಿಕೆಗೆ ಅತೀತವಾದ ಅಗತ್ಯಗಳನ್ನೂ ಕಾಳಜಿಗಳನ್ನೂ ಅರ್ಥಮಾಡಿಕೊಳ್ಳುವ ಶಿಕ್ಷಕ/ಶಿಕ್ಷಕಿಯರು ಮಕ್ಕಳ ಕಲಿಕೆಯ ವಿಕಾಸದಲ್ಲಿ ಬಹಳಷ್ಟು ಸಹಾಯವನ್ನು ಮಾಡಬಲ್ಲರು.

ಮೇಲೆ ವಿವರಿಸಲಾದ ನಂಬಿಕೆಗಳು ಮತ್ತು ಊಹನೆಗಳೇ ಸಿಸಿಇಗೆ

ಪೀಠಿಕೆಯನ್ನು ನಿರ್ಮಿಸುತ್ತವೆ ಎಂದು ಹೇಳಬಹುದಾಗಿದೆ.

ಈಗ ಶಾಲೆಗಳಲ್ಲಿನ ಆಚರಣೆಗಳು ಹಾಗೂ ಸಿಸಿಇಯ ನೀತಿ ನಿರೂಪಣೆಯ ಮಾರ್ಗದರ್ಶಿಗಳಲ್ಲಿ ನೀಡಲಾಗಿರುವ ನಿರ್ದೇಶಕ ತತ್ತ್ವಗಳ ಬಗ್ಗೆ ಗಮನಹರಿಸೋಣ.

1. ಹೆಚ್ಚಿನ ರಾಜ್ಯಗಳೂ ಸಿಸಿಇ ಮಾರ್ಗದರ್ಶಿ ಸೂತ್ರಗಳನ್ನು ಕೈಪಿಡಿಗಳ ಅಥವಾ ಹಸ್ತ ಪುಸ್ತಿಕೆಗಳ ಮೂಲಕ ವಿಸ್ತಾರವಾಗಿ ಪ್ರಚಾರಪಡಿಸಿದವು. ಈ ಕೈಪಿಡಿಗಳು ಹೊಸ ಮೌಲ್ಯಮಾಪನ ಕ್ರಮಗಳನ್ನು ಪರಿಚಯ ಮಾಡಿಸಿದವು. ಉದಾ: ಎಷ್ಟು ಬಾರಿ ಪರೀಕ್ಷೆಗಳನ್ನು ನಡೆಸಬೇಕು, ಇದರಲ್ಲಿ ರೂಪಣಾತ್ಮಕ ಅಂದರೆ ಕಲಿಕಾವಧಿಯ ಪರೀಕ್ಷೆಗಳಿಗೆ ಹಾಗೂ ಸಂಕಲನಾತ್ಮಕ ಅಂದರೆ ಕಲಿಕಾಂತ್ಯದ ಪರೀಕ್ಷೆಗಳಿಗೆ ಎಷ್ಟು ಭಾಗ ಮೌಲ್ಯಗಳನ್ನು ವಿಧಿಸಬೇಕು, ಎಷ್ಟು ವಿಧದ ಮೌಲ್ಯಮಾಪನವನ್ನು ಮಾಡಬೇಕು ಇತ್ಯಾದಿ.
2. ಅನೇಕ ರಾಜ್ಯಗಳು ಇಡೀ ಶೈಕ್ಷಣಿಕ ವರ್ಷದಲ್ಲಿ ಹಲವು ಬಾರಿ ಮಗುವಿನ ಕಲಿಕೆಯ ಪ್ರಗತಿಯನ್ನು ಅಳೆಯುವುದು ಸಾಧ್ಯವಾಗುವಂತೆ ಶಾಲಾ ಅಂಕಪಟ್ಟಿ ನಮೂನೆಯಲ್ಲಿ ಬದಲಾವಣೆ ತಂದವು. ಅನೇಕ ರಾಜ್ಯಗಳು ಅಂಕದ ಬದಲು ಶ್ರೇಣಿಯನ್ನು ಜಾರಿಗೆತಂದವು.
3. ಅಂಕಪಟ್ಟಿಗೆ ಹೊಸ ವಿಷಯಗಳನ್ನು ಸೇರಿಸಲಾಯಿತು– ಉದಾಹರಣೆಗೆ ವೈಯಕ್ತಿಕ ಹಾಗೂ ಸಾಮಾಜಿಕ ಗುಣವಿಶೇಷಗಳು. ಕೆಲವೆಡೆ ಇಂತಹ ವಿಷಯಗಳಲ್ಲಿ ಶ್ರೇಣಿಗಳನ್ನು ಕೊಡಲಾಯಿತು; ಕೆಲವು ಸಂದರ್ಭಗಳಲ್ಲಿ ವಿಶೇಷ ಗುಣಗಳ ಕುರಿತ ಟಿಪ್ಪಣಿಗಳಿಗೆ ಅವಕಾಶ ನೀಡಲಾಯಿತು.
4. ಹೊಸ ತಖ್ತೆಗಳನ್ನು ಜಾರಿಗೆತಂದರು. ಶಿಕ್ಷಕಿಯು ಅವುಗಳನ್ನು ಕಾಲಕಾಲಕ್ಕೆ ತುಂಬಿಸಬೇಕಾಯಿತು. ತಖ್ತೆಗಳನ್ನು ಭರ್ತಿ ಮಾಡುವ ಕಾರ್ಯದಲ್ಲಿ ಅವರಿಗೆ ತರಬೇತಿ ನೀಡಲಾಯಿತು.

ಈ ಎಲ್ಲಾ ವಿದ್ಯಮಾನಗಳ ನಡುವೆಯೂ ಕೆಲವು ವಿಷಯಗಳು ಬದಲಾಗಲೇ ಇಲ್ಲ:

1. ತರಗತಿಯ ವ್ಯವಹಾರಗಳೆಲ್ಲವೂ ಹಿಂದಿನಂತೆಯೇ ಶಿಕ್ಷಕರಿಂದ ನಿರ್ದೇಶಿತವಾಗಿಯೇ ನಡೆಯುತ್ತಿತ್ತು. ಅಲ್ಲಿ ಕಲಿಕೆಯು ಪಠ್ಯಪುಸ್ತಕದ ಸೀಮೆಯನ್ನು ದಾಟಲೇ ಇಲ್ಲ; ಪರಿಕಲ್ಪನಾತ್ಮಕ ಸ್ಪಷ್ಟತೆಯನ್ನು ಹೊಂದುವ ಹಾಗೂ ಪಠ್ಯಕ್ರಮದ ಉದ್ದೇಶ ಸಾಧನೆಯ ಗುರಿಗಳನ್ನು ತಲಪುವ ಕಡೆಗೆ ಗಮನಹರಿಯಲಿಲ್ಲ.
2. ಸೇವಾಪೂರ್ವದ ಹಾಗೂ ಸೇವಾಂತರ್ಗತ ತರಬೇತಿಯಲ್ಲಿ ಸಹಾ ಶಿಕ್ಷಕರ ವೃತ್ತಿಪರ ಬೆಳವಣಿಗೆ ಕಾರ್ಯಕ್ರಮಗಳು ಬೋಧನ ಶಾಸ್ತ್ರದ ಹಾಗೂ ಮೌಲ್ಯಮಾಪನ ಕುರಿತಾಗಿ ಸ್ಪಷ್ಟವಾದ ಪರಿಕಲ್ಪನೆಗಳನ್ನು ಅಭ್ಯರ್ಥಿಗಳಲ್ಲಿ ಮೈಗೂಡಿಸುವಲ್ಲಿ ಆಂಶಿಕವಾಗಿ ಮಾತ್ರ ಸಮರ್ಥವಾಗಿವೆ.
3. ಈಗಲೂ ಮೌಲ್ಯಮಾಪನದ ಕುರಿತಾದ ದೃಷ್ಟಿಕೋನವೆಂದರೆ ಅದು ಮಕ್ಕಳನ್ನು ಕಲಿಕೆಯಲ್ಲಿ 'ನಿಧಾನ', 'ಸರಾಸರಿ' ಹಾಗೂ 'ಶೀಘ್ರ' ಮಟ್ಟದವರು ಎಂದು ಪಟ್ಟಿಮಾಡುವಂತಹದ್ದಾಗಿದೆ. ಈಗಲೂ ಕಲಿಯುವ ಹೊಣೆಗಾರಿಕೆ ಮಕ್ಕಳದ್ದೇ ಹೊರತು ಶಾಲಾ ವಾತಾವರಣದ್ದಾಗಲಿ, ಶಿಕ್ಷಕಿಯ ತಯಾರಿಯದ್ದಾಗಲಿ ಅಲ್ಲ.
4. ಶೈಕ್ಷಣಿಕ ಆಡಳಿತಗಾರರಾಗಲಿ, ತರಗತಿಯಲ್ಲಿ ಶಿಕ್ಷಕರ ಶ್ರೇಯೋಭಿವೃದ್ಧಿಗಾಗಿ ಕಾರ್ಯವೆಸಗುವವರಾಗಲಿ ಅವರು ಸಿದ್ಧಪಡಿಸಿದ ದತ್ತಾಂಶಗಳ ದಾಖಲೆಗಳನ್ನು ಹಾಗೂ ತಖ್ತೆಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳುತ್ತಾರೆ.

ಮೌಲ್ಯಮಾಪನದ ವಿಷಯವಾಗಿ ಹೊಸ ಪರಿಕಲ್ಪನೆಗಳನ್ನು ಮೂಡಿಸುವ ಕಮ್ಮಟಗಳೇ ನಡೆಯದಿರುವಾಗ ಶಿಕ್ಷಕರೇ ತಾವಾಗಿ ಈ ಪರಿಕಲ್ಪನೆಗಳನ್ನು ಮೈಗೂಡಿಸಿಕೊಳ್ಳುವರು ಎಂದು ನಿರೀಕ್ಷಿಸುವುದು ಬಹುಮಟ್ಟಿಗೆ ಅನ್ಯಾಯವೆಂದೇ ಅನಿಸುತ್ತದೆ. ರೂಪಣಾತ್ಮಕ, ಅಂದರೆ ಕಲಿಕಾವಧಿಯ ಮೌಲ್ಯಮಾಪನವು ಅಗತ್ಯವಿರುವೆಡೆಯಲ್ಲಿ ಬಳಸಬೇಕಾದ ವಿಚಾರವಾಗಿರುವುದರಿಂದ ಹಾಗೂ ತರಗತಿಯಿಂದ ತರಗತಿಗೆ ಅದರ ಸ್ವರೂಪ ಬದಲಾಗಬಹುದಾದ್ದರಿಂದ ಅದಕ್ಕೆ ಸಿದ್ಧತಖ್ತೆಯನ್ನೋ ಪರೀಕ್ಷಾ ವೇಳಾಪಟ್ಟಿಯನ್ನೋ ತಯಾರಿಸುವುದು ನಿರಂತರ ಕಲಿಕಾವಧಿಯ ಮೌಲ್ಯಮಾಪನವೆಂಬ ತತ್ತ್ವದ ಕಲ್ಪನೆಯ ಉದ್ದೇಶವನ್ನೇ ವಿಫಲಗೊಳಿಸುತ್ತದೆ. ಹೀಗೆ ಯಾವುದೇ ಮೂಲಭೂತ ಸಿದ್ಧತೆಗಳಿಲ್ಲದೆ ಜಾರಿಗೆ ತಂದ ಸಿಸಿಇ ಯಶಸ್ವಿಯಾಗುವುದಾದರೂ ಹೇಗೆ?

ಸಾಧ್ಯವಿಲ್ಲವೆಂಬುದೇ ಖಚಿತವಾದ ಉತ್ತರ. ಅಥವಾ ಅದು ಯಶಸ್ಸು ಪಡೆದರೂ ಬಲುಸೀಮಿತ ಪ್ರಮಾಣದಲ್ಲಿ ಮಾತ್ರ. ಬಹುಶಃ ಉತ್ತಮ ಬೋಧನಾ ಶಾಸ್ತ್ರದ ಅರಿವು ಉಳ್ಳ ಶಿಕ್ಷಕರ ತರಗತಿಯಲ್ಲಿ ಮಾತ್ರ ಇದು ಯಶಸ್ಸು ಪಡೆಯಬಹುದು. ಇಂತಹ ವಾತಾವರಣದಲ್ಲಿ ಅತ್ಯಂತ ಅಗತ್ಯವೆನಿಸಿರುವ ಮೌಲ್ಯಮಾಪನದ ಸುಧಾರಣೆಯ ಪ್ರಯತ್ನಕ್ಕೆ ಸೋಲು ನಿಶ್ಚಿತವಾಗಿತ್ತು.

ಶಾಲೆಯಲ್ಲಿ ನಮ್ಮ ಮಕ್ಕಳ ಕಲಿಕೆಯ ಮಟ್ಟವನ್ನು ಹೆಚ್ಚಿಸಬೇಕಿದ್ದರೆ ರೂಪಣಾತ್ಮಕ ಮೌಲ್ಯಮಾಪನ ಪದ್ಧತಿಯನ್ನೇ ಅನುಸರಿಸುವುದು ಮಹತ್ತ್ವವಾದುದು. ಸಿಸಿಇ ಪದ್ಧತಿಗಳ ಮೂಲಕ ಮಾತ್ರವೇ ಇದನ್ನು ಸಾಧಿಸಲು ಸಾಧ್ಯ. ಇದಕ್ಕಾಗಿ ಈ ಕೆಳಗಿನ ಕೆಲವೊಂದು ವಿಚಾರಗಳಿಗೆ ಆದ್ಯತೆ ನೀಡಬೇಕು:

1. ಈ ಕಾರ್ಯಕಷ್ಟ ಸಾಧ್ಯವಾದುದೆಂದು ಒಪ್ಪಿಕೊಳ್ಳೋಣ. ಇದರ ಸಾಧನೆಗೆ ಕಾಲಾವಕಾಶ ಅಗತ್ಯವೆಂಬುದನ್ನೂ ಒಪ್ಪಿಕೊಳ್ಳೋಣ. ಮೌಲ್ಯಮಾಪನದ ಕುರಿತಾದ ನಮ್ಮ ಮನೋಧರ್ಮವನ್ನು ಬದಲಾಯಿಸುವುದು ಸುಲಭ ಸಾಧ್ಯವಲ್ಲ. ಆದರೆ ಇದು ಅಗತ್ಯವಾದುದು; ಆದ್ದರಿಂದ ಅದಕ್ಕಾಗಿ ಸಮಯವನ್ನು ಮೀಸಲಿರಿಸೋಣ.
2. ಶಿಕ್ಷಕರಿಗೆ ಮೌಲ್ಯಮಾಪನದ ಕುರಿತು ಪರಿಕಲ್ಪನೆಗಳನ್ನು ಒದಗಿಸಲು ವಿಚಾರ ಕಮ್ಮಟಗಳನ್ನು ಏರ್ಪಡಿಸಬೇಕು. ಸಿಸಿಇ ಎಂಬುದು ಒಂದು ವೇಳಾಪಟ್ಟಿಯ ಮೂಲಕವೋ ಕೆಲವು ತಖ್ತೆಗಳ ಮೂಲಕವೋ ಜಾರಿಗೆ ತರಬಹುದಾದಂತಹ ತಂತ್ರವಿಧಾನವೋ ನೀತಿಯೋ ಅಲ್ಲ.
3. ಮೌಲ್ಯಮಾಪನವನ್ನು ಹೇಗೆ ಮಾಡಬೇಕೆಂಬ ವಿನ್ಯಾಸ ರಚನೆ, ದಾಖಲೆಗಳ ಸಂಯೋಜನೆ ಹಾಗೂ ಗುಣಮಟ್ಟದ ವರದಿಗಳನ್ನು ಬರೆಯುವುದಕ್ಕೆ ಶಿಕ್ಷಕರಿಗೆ ಬೆಂಬಲ ಒದಗಿಸಲು ಬಲವಾದ ಮಾರ್ಗದರ್ಶನ ವ್ಯವಸ್ಥೆಗಳನ್ನು ರೂಪಿಸಬೇಕು. ಈ ವಿಷಯದಲ್ಲಿ ಜಗತ್ತಿನ ವಿವಿಧೆಡೆ ಆಚರಣೆಯಲ್ಲಿರುವ ಉತ್ಕೃಷ್ಟ ಆಚರಣೆಗಳ ಪರಿಚಯವುಳ್ಳ ಶಿಕ್ಷಕ ತರಬೇತುದಾರರು, ಸಮಾಜ ಸೇವಾ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಸಹಾಯಮಾಡಬಹುದು.
4. ಶಾಲೆಗಳ ಮೇಲುಸ್ತುವಾರಿ ಮಾಡುವ ಅಧಿಕಾರಸ್ಥರು ಬರೇ ತಖ್ತೆಗಳನ್ನೂ ಮಕ್ಕಳ ಅಂಕಪಟ್ಟಿಗಳನ್ನೂ ನೋಡುವ ಬದಲು

ತರಗತಿಯಲ್ಲಿ ನಡೆಯುವ ಬೋಧನೆಯನ್ನೂ ಗಮನಿಸಬೇಕು. ಶಿಕ್ಷಕ/ಶಿಕ್ಷಕಿ ಸಿಸಿಇ ಪದ್ಧತಿ ಅನುಸರಿಸುತ್ತಿದ್ದಾರೆಯೇ ಎಂಬುದಕ್ಕೆ ನಂಬಲರ್ಹ ಪುರಾವೆಗಳು ತರಗತಿ ಕೊಠಡಿಯಲ್ಲಿ ಸಿಗಬಹುದೇ ಹೊರತು ಶಿಕ್ಷಕರ ಕೊಠಡಿಯಲ್ಲಿ ಅಲ್ಲ.

5. ಸಿಸಿಇಯನ್ನು ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿಯೂ ರೂಢಿಸಬೇಕು. ಇದರಿಂದ ಶಿಕ್ಷಕ ತರಬೇತಿದಾರರೂ ಇಂತಹ ಮೌಲ್ಯಮಾಪನ ಪದ್ಧತಿಯನ್ನು 'ಜಾರಿಗೊಳಿಸುವ' ಕುರಿತು ಉತ್ತಮ ತಿಳಿವಳಿಕೆಯನ್ನು ಪಡೆಯುತ್ತಾರೆ. ಶಿಕ್ಷಕ ತರಬೇತಿ ಅಭಿವೃದ್ಧಿಗಳಿಗೂ ಇದನ್ನು ನಿಕಟವಾಗಿ ಗಮನಿಸುವ ಅವಕಾಶ ಒದಗುವುದು, ಮುಂದೆ ತಾವೂ ತಮ್ಮ ತರಗತಿಗಳಲ್ಲಿ ಇದನ್ನು ಹೇಗೆ ಜಾರಿಗೆ ತರಬೇಕೆಂಬುದನ್ನು ಅವರು ಕಲಿಯುತ್ತಾರೆ.
6. ತಮ್ಮ ಮಕ್ಕಳು ಶಾಲೆಯಲ್ಲಿ ಕಲಿಕೆಯ ವಿವಿಧ ಆಯಾಮಗಳಲ್ಲಿ ಏನನ್ನು ಕಲಿಯುತ್ತಿದ್ದಾರೆ ಎಂದು ತಿಳಿಯಲು ಪೋಷಕರೂ ಶಾಲೆಗಳಿಂದ ಮಕ್ಕಳ ಓದಿನ ಕುರಿತು ಗುಣಮಟ್ಟದ ವರದಿಯನ್ನು ಆಗ್ರಹಿಸಬೇಕು.

ಸಿಸಿಇ ಜೊತೆಗೆ ನಾಪಾಸು ರಹಿತ ಕಲಿಕೆ ಪದ್ಧತಿಯೂ ಆಚರಣೆಗೆ ಬರಬೇಕು. ನಾಪಾಸು ರಹಿತ ಶಿಕ್ಷಣ ಪದ್ಧತಿಯಲ್ಲಿ ಅನೇಕ ಸಾಧಕ–ಬಾಧಕಗಳಿದ್ದಾಗ್ಯೂ, ಸಿಸಿಇ ಪದ್ಧತಿಯ ಪರಿಕಲ್ಪನೆಯೂ ಜಾರಿಯೂ ಸಮರ್ಪಕವಾಗಿ ಆಗಿಲ್ಲ ಎಂಬ ಕಾರಣಕ್ಕೆ ನಾಪಾಸು ರಹಿತ ಪದ್ಧತಿಯನ್ನು ಕೈ ಬಿಡುವುದು ಪ್ರತಿಗಾಮಿ ಕ್ರಮ ಎನಿಸುವುದು. ಸಿಸಿಇ ಹಾಗೂ ಎನ್ಡಿಪಿಗಳ (ನಾಪಾಸು ರಹಿತ ಕಲಿಕೆ) ಭವಿಷ್ಯ ಏನು ಎಂಬುದು ಇನ್ನೂ ಖಚಿತವಾಗಿಲ್ಲ ಎಂಬುದು ನಿಜವೇ ಆದರೂ ಇವೆರಡು ನೀತಿಗಳನ್ನೂ ಪರಿಣಾಮಕಾರಿಯಾಗಿ ಜಾರಿಗೆ ತರಲು, ಒಂದು ದೇಶವಾಗಿ ನಾವು ಪ್ರಯತ್ನ ಮಾಡಿಲ್ಲ ಎಂಬುದೂ ಅಷ್ಟೇ ನಿಜ. ನಾವು, ಒಂದು ದೇಶವಾಗಿ, ಒಂದನೇ ನೀತಿ (ಸಿಸಿಇ) ಯನ್ನು ಪಾಲನೆಗೆ ತರುವುದಕ್ಕೆ ಸರಿಯಾದ ಪ್ರಯತ್ನಗಳನ್ನು ಮಾಡದೆಯೇ ಎರಡನೆಯದನ್ನು (ಎನ್ ಡಿಪಿ) ಜಾರಿಗೆ ತಂದೆವು. ಬೋಧನೆ–ಕಲಿಕೆಯ ಪ್ರಕ್ರಿಯೆಯೊಂದಿಗೆ ಏಕೀಕೃತಗೊಂಡ ಮೌಲ್ಯಮಾಪನಗಳಿಂದ ವಿದ್ಯಾರ್ಥಿಯ ಕಲಿಕೆಯ ಮೇಲೆ ಮಹತ್ತ್ವದ ಪರಿಣಾಮ ಉಂಟಾಗುತ್ತದೆ ಎಂಬುದು ಸರ್ವಮಾನ್ಯ ವಿಚಾರವಾಗಿದೆ. ಈಗ ನಾವು ಜಾರಿಯಲ್ಲಿ ದೋಷವಿತ್ತು, ಉಪಕ್ರಮ ಜಾರಿಗೆ ಸಿದ್ಧತೆ ಇರಲಿಲ್ಲ ಎಂದು ಟೀಕಿಸುತ್ತಾ ಕಾಲ ವ್ಯಯಮಾಡಬೇಕೇ, ಇಲ್ಲವೇ ಆಗಿ ಹೋದ ತಪ್ಪುಗಳಿಂದ ಪಾಠ ಕಲಿತು ಈ ಹೊಸ ಪದ್ಧತಿಯನ್ನು ಶಾಲೆಗಳಲ್ಲಿ ಅಳವಡಿಸಲು ಕಾರ್ಯೋನ್ಮುಖರಾಗಬೇಕೇ ಎಂಬುದನ್ನು ತೀರ್ಮಾನಿಸಬೇಕಾಗಿದೆ.

● ಅನುವಾದಕರು: **ಜಿ ಕೆ ಮಧ್ಯಸ್ಥ** | ಪರಿಶೀಲಕರು: **ಶೈಲಜಾ ಜಿ ಪಿ**

**ಆಂಚಲ್** ಅವರು ಕಳೆದ ಹನ್ನೆರಡು ವರ್ಷಗಳಿಂದ ಅಜೀಂಪ್ರೇಮ್ ಜಿ ವಿಶ್ವ ವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಅಜೀಂ ಪ್ರೇಮ್‌ಜಿ ನಿರಂತರ ಶಿಕ್ಷಣ ಹಾಗೂ ವಿಶ್ವವಿದ್ಯಾಲಯ ಸಂಪನ್ಮೂಲ ಕೇಂದ್ರದ ಮೌಲ್ಯಮಾಪನ ಹಾಗೂ ಮಾನ್ಯತಾ ಸಂಸ್ಥೆಯ (ಇನ್ ಸ್ಟಿಟ್ಯೂಟ್ ಆಫ್ ಅಸೆಸ್‌ಮೆಂಟ್ ಅಂಡ್ ಅಕ್ರೆಡಿಟೇಶನ್) ಮುಖ್ಯಸ್ಥೆ. ವಿದ್ಯಾರ್ಥಿಗಳ, ಶಿಕ್ಷಕರ, ಶಿಕ್ಷಕ ತರಬೇತುದಾರರ ಹಾಗೂ ಶಿಕ್ಷಣ ಸಂಸ್ಥೆಗಳ ಮೌಲ್ಯಮಾಪನಕ್ಕೆ ಚೌಕಟ್ಟು, ಪರಿಕರ, ಪ್ರಕ್ರಿಯೆ ಹಾಗೂ ವಿಧಾನಗಳನ್ನು ರೂಪಿಸುವುದು ಅವರ ಕಾರ್ಯಕ್ಷೇತ್ರವಾಗಿದೆ. ಅವರು ದೇಶದ ಹಲವು ರಾಜ್ಯಗಳಲ್ಲಿ ಮೌಲ್ಯಮಾಪನ ವಿಭಾಗಗಳ ಬಗ್ಗೆ ಸಬಲೀಕರಣ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಅವರು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾದೇಶಿಕ ಅಭಿವೃದ್ಧಿ ಅಧ್ಯಯನ ಕೇಂದ್ರದಿಂದ ಭೂಗರ್ಭ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಅವರು ಭೂಗರ್ಭ ಶಾಸ್ತ್ರದಲ್ಲಿ ಪದವಿಯನ್ನು ಕೋಲ್ಕತ್ತದ ಪ್ರೆಸಿಡೆನ್ಸಿ ಕಾಲೇಜಿನಿಂದ ಪಡೆದರು. ಅವರ ವಿಳಾಸ: aanchal@azimpremjifoundation.org